**A**

**CCE RF/PF**
**Revised Syllabus**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ - 1

**MARCH/APRIL 2025 EXAMINATION - 1**

# ಮಾದರಿ ಉತ್ತರಗಳು
# MODEL ANSWERS

ಸಂಕೇತ ಸಂಖ್ಯೆ : **62-K** CODE No. : **62-K**

## ವಿಷಯ : ತೃತೀಯ ಭಾಷೆ — ಕನ್ನಡ
## Subject : Third Language — KANNADA

(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / Regular Fresh / Private Fresh)

ದಿನಾಂಕ : 04. 04. 2025 ] [ ಗರಿಷ್ಠ ಅಂಕಗಳು : 80

Date : 04. 04. 2025 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 8 × 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ<br>(ಎ) ೦೬ (ಬಿ) ೦೭<br>(ಸಿ) ೧೩ (ಡಿ) ೩೪<br>ಉತ್ತರ : (ಸಿ) ೧೩ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ಅಸತ್ಯ' ಈ ಪದದ ವಿರುದ್ಧಾರ್ಥಕ ಪದ<br>(ಎ) ಸುಳ್ಳು (ಬಿ) ಸತ್ಯ<br>(ಸಿ) ಪುಣ್ಯ (ಡಿ) ನಿಸತ್ಯ<br>**ಉತ್ತರ :** (ಬಿ) ಸತ್ಯ | |
| 3. | ನವೆಂಬರ್ ೧ ರಂದು ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ವಾಕ್ಯದಲ್ಲಿ 'ಶಾಲೆಯಲ್ಲಿ' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ<br>(ಎ) ಪ್ರಥಮಾ ವಿಭಕ್ತಿ (ಬಿ) ತೃತೀಯಾ ವಿಭಕ್ತಿ<br>(ಸಿ) ಪಂಚಮೀ ವಿಭಕ್ತಿ (ಡಿ) ಸಪ್ತಮೀ ವಿಭಕ್ತಿ<br>**ಉತ್ತರ :** (ಡಿ) ಸಪ್ತಮೀ ವಿಭಕ್ತಿ | |
| 4. | ಕೆಳಗಿನವುಗಳಲ್ಲಿ ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ನೆತ್ತರೊಂದೆ (ಬಿ) ದೀಪಾಲಂಕಾರ<br>(ಸಿ) ಪೂರ್ವೋತ್ತರ (ಡಿ) ಅತ್ಯಂತ<br>**ಉತ್ತರ :** (ಎ) ನೆತ್ತರೊಂದೆ | |
| 5. | ಬರವಣಿಗೆಯಲ್ಲಿ ಪಾರಿಭಾಷಿಕ, ಪ್ರಧಾನ, ವಿಶಿಷ್ಟ ಅರ್ಥ ಕೊಡುವ ಪದಗಳನ್ನು ಬಳಸಿದಾಗ ಉಪಯೋಗಿಸುವ ಲೇಖನ ಚಿಹ್ನೆ<br>(ಎ) ಆವರಣ (ಬಿ) ವಾಕ್ಯವೇಷ್ಟನ<br>(ಸಿ) ಉದ್ಧರಣ (ಡಿ) ಅಲ್ಪವಿರಾಮ<br>**ಉತ್ತರ :** (ಬಿ) ವಾಕ್ಯವೇಷ್ಟನ ಚಿಹ್ನೆ | |
| 6. | 'ಕಾವ್ಯ' – ಈ ಪದದ ತದ್ಭವ ರೂಪ<br>(ಎ) ಕಬ್ಬ (ಬಿ) ಕವಿ<br>(ಸಿ) ಕವನ (ಡಿ) ಕಾವ<br>**ಉತ್ತರ :** (ಎ) ಕಬ್ಬ | |
| 7. | ಕೆಳಗಿನವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯಾದ ಪದ<br>(ಎ) ಮನೆ (ಬಿ) ಕಾವೇರಿ<br>(ಸಿ) ವ್ಯಾಪಾರಿ (ಡಿ) ಪರ್ವತ<br>**ಉತ್ತರ :** (ಬಿ) ಕಾವೇರಿ | |
| 8. | ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸು ಬರುವುದೆಂದು ತಿಳಿದು ಗ್ರಾಮಸ್ಥರು ಸಂತಸಪಟ್ಟರು. – ಇದು<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರವಾಕ್ಯ (ಡಿ) ಅಲಂಕಾರಿಕ ವಾಕ್ಯ<br>**ಉತ್ತರ :** (ಸಿ) ಮಿಶ್ರವಾಕ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ಹಜರತ್ ಇಮಾಮರ ಪತ್ನಿ : ಹಾಜುಮ್ :: ಶರೀಫ ಸಾಹೇಬರ ಪತ್ನಿ : .............. | |
| | ***ಉತ್ತರ :*** ಫಾತಿಮಾ | |
| 10. | ಮಂಕುತಿಮ್ಮನ ಕಗ್ಗ : ಡಿ.ವಿ. ಗುಂಡಪ್ಪ :: ರತ್ನನ ಪದಗಳು : ...................... | |
| | ***ಉತ್ತರ :*** ಜಿ.ಪಿ. ರಾಜರತ್ನಂ | |
| 11. | ಅನ್ಯರಿಗೆ : ಅಸಹ್ಯ ಪಡಬೇಡ :: ತನ್ನ : .......................... | |
| | ***ಉತ್ತರ :*** ಬಣ್ಣಿಸಬೇಡ | |
| 12. | ಬಸವಣ್ಣ : ಕೂಡಲ ಸಂಗಮದೇವ :: ಪುರಂದರದಾಸರು : ................. | |
| | ***ಉತ್ತರ :*** ಪುರಂದರ ವಿಠಲ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ಶಿಶುನಾಳ ಶರೀಫರ ಗುರುಗಳು ಯಾರು ? | |
| | ***ಉತ್ತರ :*** | |
| | ಶಿಶುನಾಳ ಶರೀಫರ ಗುರುಗಳು ಗೋವಿಂದ ಭಟ್ಟರು. | |
| 14. | ರೈತನು ಹೆಚ್ಚು ಮಳೆ ಎಲ್ಲಿ ಸುರಿಯಬೇಕೆಂದು ಬಯಸುತ್ತಾನೆ ? | |
| | ***ಉತ್ತರ :*** | |
| | ರೈತನು ಹೆಚ್ಚು ಮಳೆ ಭೈರವ ಬೆಟ್ಟದಲ್ಲಿ ಸುರಿಯಬೇಕೆಂದು ಬಯಸುತ್ತಾನೆ. | |
| 15. | ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ? | |
| | ***ಉತ್ತರ :*** | |
| | ವಿಶುವಿನ ಎದೆಯಲ್ಲಿ ತನ್ನ ಮಗ 'ಮಹಾಶಿಲ್ಪಿ' ಎಂಬ ಪದ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 16. | ಕಂಬಳಿ ಹುಳುವಿನ ಆಸೆ ಏನು ?<br>**ಉತ್ತರ :**<br>ಕಂಬಳಿ ಹುಳುವಿಗೆ ತಾಯಿ ಚಿಟ್ಟೆಯಂತೆ ತೆಳು ರೆಕ್ಕೆ ಪಡೆದು ಮೇಲೆ ಹಾರುವ ಆಸೆ ಇದೆ. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **8 × 2 = 16** |
| 17. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?<br>**ಉತ್ತರ :**<br>ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಗೊರೂರರನ್ನು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಗೊರೂರರಿಗೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ನೀಡಿದನು. ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ನೀಡಿ ಮಲಗಲು ಹೇಳಿ ಉಪಚರಿಸಿದನು. | |
| 18. | ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ.<br>**ಉತ್ತರ :**<br>ಶರೀಫರು ಧೃತಿಗೆಡದೆ ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಮತ್ತು ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆಯಲು ಹವಣಿಸುತ್ತಿದ್ದರು. ಮನೆಯ ಮಗ್ಗುಲಿನ ಕಟ್ಟೆಯ ಮೇಲೆ ಕುಳಿತು ಅಧ್ಯಾತ್ಮ-ಸುಬೋಧ ಧರ್ಮ-ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡರು. | |
| 19. | ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು ?<br>**ಉತ್ತರ :**<br>'ಬೋಲೋ ಭಾರತ ಮಾತಾಕೀ ಜೈ', 'ವಂದೇ ಮಾತರಂ', 'ಮಹಾತ್ಮ ಗಾಂಧೀಜಿಕೀ ಜಯ್', 'ರಾಮಸಿಂಗ್‌ಕೀ ಜಯ್' ಇವೆಲ್ಲವೂ ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 20. | ಪೋರ್ಚುಗೀಸರು ಭಾರತೀಯರನ್ನು ಆರ್ಥಿಕವಾಗಿ ಹೇಗೆ ಶೋಷಣೆ ಮಾಡುತ್ತಿದ್ದರು ?<br>***ಉತ್ತರ :***<br>ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ರೈತರು ಕಷ್ಟಪಟ್ಟು ಬೆವರು ಸುರಿಸಿ ಬೆಳೆದ ಏಲಕ್ಕಿ, ಅಕ್ಕಿ, ಮೆಣಸಿನಕಾಳು ಮತ್ತು ನೇಕಾರರು ನೇಯ್ದ ಬಟ್ಟೆಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳಲು ಬಯಸುತ್ತಿದ್ದರು. ಅಲ್ಲದೆ ಸ್ಥಳೀಯ ರಾಜ ಸಂಸ್ಥಾನಗಳಿಂದ ಅನ್ಯಾಯವಾಗಿ ವಾರ್ಷಿಕ ಕಪ್ಪವನ್ನು ಸಂಗ್ರಹಿಸಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು. | |
| 21. | ಗೋಪಾಲಕೃಷ್ಣ ಅಡಿಗರು ತಿಳಿಸಿರುವಂತೆ ಯುವ ಜನತೆಯ ಮಂದಿರದಲ್ಲಿ ಯಾರು ಯಾರಿಗೆಲ್ಲ ಸ್ವಾಗತವಿದೆ ಎಂಬುದನ್ನು ವಿವರಿಸಿ.<br>***ಉತ್ತರ :***<br>ಯುವ ಜನತೆಯು ಹಳೆಯ ಕೊಳೆಯನ್ನು ಕಳೆದು ನವದ ಶುಭದೊಂದಿಗೆ ಸ್ವರ್ಗವನ್ನು ಎಳೆದು ತರುವ ಉತ್ಸಾಹ ತೋರುತ್ತಿದ್ದಾರೆ. ಅವರ ಸ್ವಚ್ಛಂದವಾದ ಹಚ್ಚ ಹಸುರಿನ ಹೃದಯ ಮಂದಿರದಲ್ಲಿ ಜಾತಿ, ಮತ, ಧರ್ಮ, ವರ್ಣ, ಬಡವ-ಬಲ್ಲಿದ ಮತ್ತು ಹೆಣ್ಣು-ಗಂಡುಗಳೆಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನ ಸ್ವಾಗತವಿದೆ ಎಂದು ಕವಿ ಅಡಿಗರು ಹೇಳಿದ್ದಾರೆ. | |
| 22. | ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?<br>***ಉತ್ತರ :***<br>ಆಂಗ್ಲರು ಬಿಳಿಯ ಬಣ್ಣದವರು. ಆಫ್ರಿಕನ್ನರು ಕಪ್ಪು ಬಣ್ಣದವರು. ಆದರೆ ಅವರ ರಕ್ತದ ಬಣ್ಣ ಕೆಂಪು ಬಣ್ಣವೇ ಆಗಿದೆ. ಅದೇ ರೀತಿ ಅಕ್ಕಿಯ ಬಣ್ಣ ಬಿಳಿ, ರಾಗಿಯ ಬಣ್ಣ ಕಪ್ಪು. ಆದರೆ ಅವುಗಳ ಹುಲ್ಲಿನ ಬಣ್ಣ ಹಸಿರು ಬಣ್ಣವೇ ಆಗಿದೆ. ಈ ರೀತಿ ಬಣ್ಣ ಬೇರೆಯಾದರೂ ಜೀವರಸ ಒಂದೆ ಎಂಬ ಭಾವನೆ ಭೂಮಿತಾಯ ಕುಡಿಗಳು ಕವನದಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳಾವುವು ?<br>**ಉತ್ತರ :**<br>ಸ್ವಾತಿ ಮಳೆ ಸುರಿದಾಗ ಸಾವಿರಾರು ಕೆರೆಗಳು ತುಂಬುತ್ತವೆ. ಇದರಿಂದ ಎಲ್ಲಾ ದನ ಕರುಗಳಿಗೆ ಮೇವು ಸಿಗುತ್ತದೆ. ರೈತರು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಕುಣಿಗಲ್ ಕೆರೆಯಲ್ಲಿ ಕುಚ್ಚಲ ಮೀನುಗಳು ಹೆಚ್ಚಾಗುತ್ತವೆ. ಅವುಗಳನ್ನು ಹಿಡಿದು ಮಾರಿ ರೈತನು ಲಾಭಗಳಿಸುತ್ತಾನೆ. | |
| 24. | ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಭಟ ಮತ್ತು ಆಚಾರವಂತನಾಗಲು ಹೊಂದಿರಬೇಕಾದ ಅರ್ಹತೆಗಳನ್ನು ಕುರಿತು ಬರೆಯಿರಿ.<br>**ಉತ್ತರ :**<br>ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಯುದ್ಧ ಮಾಡುವ ಸಾಮರ್ಥ್ಯದ ಗುಣವಿರುವವನೇ ಭಟನಾಗಲು ಅರ್ಹನಾಗಿರುತ್ತಾನೆ. ಅದೇ ರೀತಿ ಶಿವನನ್ನು ಬಿಟ್ಟಿರದೆ ಕಠಿಣ ವ್ರತ ನಿಯಮಗಳ ಮೂಲಕ ಆರಾಧಿಸುವವನು ಆಚಾರವಂತನಾಗಲು ಅರ್ಹನಾಗಿರುತ್ತಾನೆ. | |
| **V.** | **ಸಂದರ್ಭಸಹಿತ ವಿವರಣೆ :** | **2 × 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ನಮ್ಮ ರಾಜ್ಯದ ರಾಜಕಾರಣಕ್ಕೆ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ."<br>**ಉತ್ತರ :**<br>ಈ ವಾಕ್ಯವನ್ನು ಬೀಚಿಯವರು ಬರೆದಿರುವ 'ನನ್ನ ಭಯಾಗ್ರಫಿ' ಎಂಬ ಕೃತಿಯಿಂದ ಆರಿಸಿದ 'ನನ್ನ ಪುಸ್ತಕ ಪ್ರಪಂಚ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಬೀಚಿಯವರು ಹೇಳಿದ್ದಾರೆ.<br>ಡಿ.ವಿ.ಜಿ.ಯವರು ಸಾಮಾಜಿಕ ಪ್ರಜ್ಞೆ ಸರ್ಕಾರಗಳ ವಿಷಯವನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ರಸವತ್ತಾಗಿ ಚಿತ್ರಿಸಿದ್ದಾರೆ. ಸರ್ಕಾರವನ್ನು ಹೇಗೆ ನಡೆಸಬೇಕೆಂಬುದನ್ನು ಡಿ.ವಿ.ಜಿ.ಯವರು ಹಡಗಿನ ಪಯಣಕ್ಕೆ ಹೋಲಿಸಿರುವ ಬಗೆಯನ್ನು ಬೀಚಿಯವರು ವಿವರಿಸುವಾಗ ಈ ಮಾತು ಬಂದಿದೆ. | |
| | ಸರ್ಕಾರವನ್ನು ಹರಿಗೋಲಿಗೆ ಹೋಲಿಸಿರುವುದು ಈ ವಾಕ್ಯದ ಸ್ವಾರಸ್ಯವಾಗಿದೆ. | |
| 26. | "ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಣ್ಣ ತಮ್ಮರು." | |
| | ***ಉತ್ತರ :*** | |
| | ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ 'ನಾವೆಲ್ಲರು ಒಂದೇ ಜಾತಿ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಎಂ. ಗೋಪಾಲಕೃಷ್ಣ ಅಡಿಗರು ಹೇಳಿದ್ದಾರೆ. | |
| | ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ನಮ್ಮ ನಾಡಿನಲ್ಲಿ ಬಣ್ಣ, ಜಾತಿ, ಮತ, ಧರ್ಮ-ನಡೆಯ ನುಡಿಯ ನೂರು ಗೋಡೆಗಳನ್ನು ಮೆಟ್ಟಿ ನಿಲ್ಲಲು ನಾವೆಲ್ಲರೂ ಒಂದೇ ತಾಯಿಯ ಮಕ್ಕಳಾಗಿ ಕೂಡಿಬಾಳಬೇಕು ಎಂದು ತಿಳಿಸುವಾಗ ಈ ಮಾತು ಬಂದಿದೆ. | |
| | ನಾವೆಲ್ಲರೂ ಅಣ್ಣ-ತಮ್ಮಂದಿರಾಗಿ, ಒಂದೇ ತಾಯಿಯ ಮಕ್ಕಳಾಗಿ ಕೂಡಿ ಬಾಳಬೇಕು ಎಂದು ಹೇಳಿರುವುದು ಈ ಮಾತಿನ ಸ್ವಾರಸ್ಯವಾಗಿದೆ. | |
| **VI.** | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? | |
| | ***ಉತ್ತರ :*** | |
| | ರಾಮಸಿಂಗನನ್ನು ಗುಂಡಿಕ್ಕಿ ಕೊಲ್ಲುವ ಹೀನಕಾರ್ಯಕ್ಕೆ ನಿಮ್ಮ ಕೈಗಳು ಹೇಗೆ ಮೇಲೆತ್ತಿ ಬಂದವು. ಭಾರತಮಾತೆಯ ಬಂಧ ವಿಮೋಚನೆಗೆ ನಿಂತ ಇವನನ್ನು ಹಿಡಿದು ಜೈಲಿಗೆ ಹಾಕಬಹುದಿತ್ತು. ಅದನ್ನು ಬಿಟ್ಟು ಅವನನ್ನು ಕೊಂದ ನಿಮ್ಮ ಪರಾಕ್ರಮ ಸರಿಯಲ್ಲ. ದುಶ್ಚಟಗಳಿಂದ ದೂರಾಗುವ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸ್ವಚ್ಛತೆಯ ಪಾಠಕಲಿಸುವ ಆಜ್ಞೆ ಮಾಡಿ ಅಕ್ಷರಶಃ ಪಾಲಿಸುವೆವು. ನಮ್ಮ ಅಜ್ಞಾನವನ್ನು ದೂರಮಾಡಿ ಜ್ಞಾನ ಜ್ಯೋತಿಯನ್ನು ಬೆಳಗಿಸಿರಿ. ನಿಮ್ಮನ್ನು ದೇವರಂತೆ ಪೂಜಿಸುವೆವು. ಆದರೆ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಹಗಳಿರುಳು ಹಂಬಲಿಸುವ ನಮಗೆ ಪಾರತಂತ್ರ್ಯದ ಕೆಸರಿನಲ್ಲಿಯೇ ಕೊಳೆಯುತ್ತಲಿರಿ ಎಂದು ಆಜ್ಞೆ ಮಾಡಿದರೆ, ಅದು ಹಿತಕರ ಆಜ್ಞೆಯಲ್ಲ. ಉನ್ಮತ್ತ ಗುಲಾಮರ ಕಿರುಕುಳ, ದಾನವನ ದರ್ಪ, ದಾಸ್ಯದ ದ್ಯೋತಕ ಎಂದು ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಖಂಡಿಸಿದನು. | |
| 28. | ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದುದು ಹೇಗೆ ? ವಿವರಿಸಿರಿ.<br>***ಉತ್ತರ :***<br>ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದ್ದರು. ಆಗ ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಯಲ್ಲಿ ಪೋರ್ಚುಗೀಸರು ಬೀಡು ಬಿಟ್ಟಿದ್ದ ಕರಾವಳಿ ತೀರಕ್ಕೆ ಹೋದರು. ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆ ಎಸೆದರು. ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ್ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಈ ರೀತಿ ಅಬ್ಬಕ್ಕದೇವಿಯು ಪೋರ್ಚುಗೀಸರ ಹಡಗನ್ನು ಮುಳುಗಿಸಿ, ಮಿರಾಂಡಾ ಮತ್ತು ಡಿ. ಮೆಲ್ಲೊ ಎಂಬ ಸೇನಾಪತಿಗಳನ್ನು ಓಡಿಸಿ ಸಪ್ತ ಸಮುದ್ರದಾಚೆ ವಿಖ್ಯಾತಳಾದಳು. | |
| 29. | ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮೌಲ್ಯಗಳನ್ನು ಕುರಿತು ಬರೆಯಿರಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಳ್ಳತನ, ಕೊಲೆಯನ್ನು ಮಾಡಬಾರದು. ಸುಳ್ಳನ್ನು ಹೇಳಬಾರದು, ಕೋಪ ಮಾಡಿಕೊಳ್ಳಬಾರದು. ಬೇರೆಯವರನ್ನು ಕಂಡು ಅಸಹ್ಯಪಡಬಾರದು, ನಮ್ಮನ್ನು ನಾವು ಹೊಗಳಿಕೊಳ್ಳಬಾರದು. ಬೇರೆಯವರನ್ನು ನಿಂದಿಸಬಾರದು. ಈ ರೀತಿಯ ಅಂತರಂಗ-ಬಹಿರಂಗ ಶುದ್ಧಿಯಂತ ಕೆಲಸಕಾರ್ಯಗಳಿಂದ ದೇವರನ್ನು ಸುಲಭವಾಗಿ ಒಲಿಸಿಕೊಳ್ಳಬಹುದೆಂದು ತಿಳಿಸಿದ್ದಾರೆ. ದೇವಲೋಕ, ಮರ್ತ್ಯಲೋಕ ಬೇರೆ ಬೇರೆ ಇಲ್ಲವೆಂದು, ಸತ್ಯವನ್ನು ನುಡಿಯುವುದನ್ನು ದೇವಲೋಕವೆಂತಲೂ, ಸುಳ್ಳನ್ನು ನುಡಿಯುವುದನ್ನು ಮರ್ತ್ಯಲೋಕವೆಂದು ಹೇಳಿದ್ದಾರೆ. ಒಳ್ಳೆಯ ನಡೆವಳಿಕೆಗಳಿಂದ ಸ್ವರ್ಗ ಪ್ರಾಪ್ತಿಯಾಗುತ್ತದೆ. ಕೆಟ್ಟ ನಡವಳಿಕೆಯಿಂದ ನರಕ ಲಭಿಸುತ್ತದೆ. ಈ ರೀತಿ ಮೌಲ್ಯಗಳನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಸಾರಿದ್ದಾರೆ. | |
| 30. | ಪುರಂದರದಾಸರು ಕಪಟಭಕ್ತಿಯ ಆರಾಧಕರನ್ನು ಅಣಕಿಸಿರುವ ಬಗೆಯನ್ನು ಏಕೆ ಮೆಚ್ಚುವಿರಿ ? ವಿವರಿಸಿರಿ.<br>***ಉತ್ತರ :***<br>ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಸುಂದರವಾಗಿ ಚಿತ್ರಿತವಾಗಿದೆ. ಡಾಂಭಿಕ ಭಕ್ತನಿಗೆ ದೇವರ ಮೇಲೆ ಸ್ವಲ್ಪವೂ ಭಕ್ತಿಯಿರುವುದಿಲ್ಲ. ಆದರೂ ಉದಯಕಾಲದಲೆದ್ದು ಗಡಗಡ ನಡುಗುತ್ತ ನದಿಯಲ್ಲಿ ಸ್ನಾನ ಮಾಡಿ ಡಾಂಭಿಕ ಭಕ್ತಿಯನ್ನು ತೋರಿಸುತ್ತಾನೆ. ಅವನ ಮನಸ್ಸಿನಲ್ಲಿ ಕಾಮ, ಕ್ರೋಧ, ಮದ, ಮತ್ಸರಗಳು ತುಂಬಿಕೊಂಡಿವೆ. ಕಂಚುಗಾರನ ಬಿಡಾರದ ಹಾಗೆ ಕಂಚು ಹಿತ್ತಾಳೆಯ ಪ್ರತಿಮೆಗಳನ್ನು ಜೋಡಿಸಿ ಅವು ಮಿಂಚಲು ಹಲವು ದೀಪಗಳನ್ನು ಹಚ್ಚಿ ವಂಚನೆಯಿಂದ ಪೂಜೆ ಮಾಡುತ್ತಾನೆ. ಕೈಯಲ್ಲಿ ಜಪಮಣಿ ಹಿಡಿದು, ಬಾಯಲಿ ಮಂತ್ರಪಠಿಸುತ್ತಾನೆ. ಅರಿವೆಯ ಮುಸುಕನ್ನು ಮೊರೆಗೆ ಹಾಕಿಕೊಂಡು ಪರಸತಿಯರನ್ನು ಮನದಲ್ಲಿ ನೆನೆಯುತ್ತ ಪರಮ ವೈರಾಗ್ಯಶಾಲಿ ಎಂದೆನಿಸಿಕೊಳ್ಳುತ್ತಾನೆ. ನಾಟಕ ಸ್ತ್ರೀಯರಂತೆ ಬಯಲ ಡಂಭವ ತೋರುತ್ತಾನೆ ಎಂದು ಪುರಂದರದಾಸರು ಕಪಟಭಕ್ತಿಯ ಆರಾಧಕರನ್ನು ಅಣಕಿಸಿರುವ ಬಗೆಯನ್ನು ಮೆಚ್ಚಬಹುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>***ಉತ್ತರ :***<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ನೇ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ', 'ಹೇಮಾವತಿ', 'ಮೆರವಣಿಗೆ', 'ಅಮೆರಿಕಾದಲ್ಲಿ ಗೊರೂರು', 'ಭೂತಯ್ಯನ ಮಗ ಅಯ್ಯು', 'ಹಳ್ಳಿಯ ಹಾಡು' ಮುಂತಾದ ಕೃತಿಗಳನ್ನು ಬರೆದಿದ್ದಾರೆ. | |
| 32. | *ಕೆ.ಎಸ್. ನಿಸಾರ್ ಅಹಮದ್ :*<br>***ಉತ್ತರ :***<br>ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ೧೯೩೬ ರ ಫೆಬ್ರವರಿ ೫ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಇವರು 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಅನಾಮಿಕ ಆಂಗ್ಲರು', 'ಸಂಜೆ ಐದರ ಮಳೆ', 'ನವೋಲ್ಲಾಸ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಹಕ್ಕಿಗಳು' ಮುಂತಾದ ಕೃತಿಗಳನ್ನು ಬರೆದಿದ್ದಾರೆ. | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | ಹಾಸಿಗೆ ಇದ್ದಷ್ಟು ಕಾಲು ಚಾಚು.<br>**ಅಥವಾ**<br>ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಗಾಂಧೀಜಿಯವರು 1933 ನೇ ವರ್ಷದ ಕೊನೆಯಲ್ಲಿ ಕರ್ನಾಟಕ ಪ್ರವಾಸವನ್ನು ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಗೌರಮ್ಮನವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠವನ್ನು ಹಿಡಿದರು. ಆಗ ಗಾಂಧೀಜಿಯವರು ಕೊಡಗಿನ ಕಿತ್ತಲೆ ಹಣ್ಣು ನೀಡಿ ಎಳೆ ಚೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದರು. ಕೊಟ್ಟ ಮಾತಿನಂತೆ ಗಾಂಧೀಜಿಯವರು ಗೌರಮ್ಮನವರ ಮನೆಗೂ ಬಂದರು. ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ನೀಡಿದಾಗ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗಾಂಧೀಜಿಯವರು ಅವಕ್ಕಾದರು. ಇವೇ ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳಾಗಿವೆ. | |
| | **ಅಥವಾ** | |
| | ಕೊಡಗಿನ ಗೌರಮ್ಮನವರಿಗೆ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮುಂತಾದ ಹೆಸರಾಂತ ಲೇಖಕರ ಪರಿಚಯವಿತ್ತು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮ ಅವರೊಡನೆ ಸಂಪರ್ಕವನ್ನು ಇವರು ಇಟ್ಟುಕೊಂಡಿದ್ದರು. ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ, ಬದಲಾವಣೆಗಳು ಮತ್ತು ಹೊಸ ಬರವಣಿಗೆಯ ಸಂಪರ್ಕ ಲೇಖಕಿಯ ಬರವಣಿಗೆಗೆ ಪೂರಕವಾಗಿದ್ದವು. ಯಕ್ಷಗಾನ, ತಾಳಮದ್ದಳೆ, ಕುಮಾರವ್ಯಾಸ ಮತ್ತು ಉಮರ್ ಖಯಾಮನ ಕಾವ್ಯಗಳ ಬಗ್ಗೆ ಇವರು ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಇವರು ಕೆಲವು ಜನಪದ ಗೀತೆಗಳನ್ನು ಸಂಗ್ರಹಿಸಿದ್ದರು. | |
| | ಗೌರಮ್ಮನವರು ಸುತ್ತಮುತ್ತಲಿನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು, ಮಹಿಳಾ ಲೋಕದ ಕನಸುಗಳು ಮತ್ತು ಆದರ್ಶಗಳು, ಮಾನವಜೀವಿಗಳ ಸ್ವಾತಂತ್ರ್ಯ, ಆರೋಗ್ಯಕರ ನಿಲುವು, ಜಾತ್ಯತೀತ ಮನೋಧರ್ಮ, ಮಾನವೀಯ ವಿಚಾರಗಳು ಹಾಗೂ ಸಮಾಜದಲ್ಲಿನ ಕ್ರೌರ್ಯದ ನಾನಾಮುಖಗಳ ಅನಾವರಣ – ಇವೆಲ್ಲವೂ ಗೌರಮ್ಮನವರ ಸಾಹಿತ್ಯ ರಚನೆಗೆ ಪ್ರೇರಕ ಮತ್ತು ಪೂರಕವಾದ ವಿಚಾರಗಳಾಗಿದ್ದವು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ಕಣ್ದಿಟ್ಟಿ ..................................................<br>..........................................................<br>..........................................................<br>.......................................... ನನ್ನ ಮತಿ | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮುದುಡಿ ......................................................<br>......................................................<br>......................................................<br>...................................................... ಲಯಕೆ !<br>***ಉತ್ತರ :***<br>ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು<br>ನಿಂತು ಬೆರಗೀಯುತಿವೆ ಪುಸ್ತಕಾಲಯದಲ್ಲಿ :<br>ಇವುಗಳಡಿ ನಾಧೂಳ ಕಣವಾಗಿ ನಿಲ್ಲುವೆನು –<br>ಚಣಕಾಲ ಬಂದು ನಿಂತರೆ ಸಾಕು, ನನ್ನ ಮತಿ<br>**ಅಥವಾ**<br>ಮುದುಡಿ ಹೋಗುವುದಿಲ್ಲಿ : ನನ್ನ ಅಹಂಕಾರವನು<br>ನುಚ್ಚು ನೂರಾಗಿಸುವುದೀ ತಾಣ ಅಪ್ಪಳಿಸಿ !<br>ಒಳಗೆ ಬಂದೆನೊ ಬೇಗ ಹೊರಗೆ ಓಡುವತವಕ –<br>ಏಕೆನಲು ಬೆದರುವೆನು ನನಗಿಲ್ಲಿ ಬಹ ಲಯಕೆ ! | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | ಅಸಿ, ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ನಮ್ಮ ನಾಡಿನ ಬೆನ್ನೆಲುಬು. 'ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು' ಎನ್ನುವ ಮಾತಿದೆ. ಅಂದರೆ ಕೃಷಿಕರೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ನಾವು ಭೂಮಿಯನ್ನು ಉಳುವುದಿಲ್ಲ, ಯಾವ ಬೆಳೆಯನ್ನೂ ತೆಗೆಯುವುದಿಲ್ಲ ಎನ್ನುವ ತೀರ್ಮಾನ ಮಾಡಿದರೆ ಗತಿ ಏನು ? ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿ ಸರ್ವಜ್ಞ 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹ. ಹೌದು, ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. | |
| | ಆದರೆ ಇಂದು ಇಂಥ ಕೃಷಿಕರ ಗತಿ ಏನಾಗಿದೆ ? ಅವನು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ. | |
| | ಎ) ನಮ್ಮ ನಾಡಿನ ಬೆನ್ನೆಲುಬು ಯಾರು ? | |
| | ***ಉತ್ತರ :*** ನಮ್ಮ ನಾಡಿನ ಬೆನ್ನೆಲುಬು ಕೃಷಿಕ. | |
| | ಬಿ) ಕಾರ್ಖಾನೆಗಳಿಂದ ಏನನ್ನು ಬೆಳೆಯಲು ಸಾಧ್ಯವಿಲ್ಲ ? | |
| | ***ಉತ್ತರ :*** ಕಾರ್ಖಾನೆಗಳಿಂದ ಟೊಮೆಟೊ, ಅಕ್ಕಿ ಮತ್ತು ರಾಗಿಯನ್ನು ಬೆಳೆಯಲು ಸಾಧ್ಯವಿಲ್ಲ. | |
| | ಸಿ) ಬೆಳೆಗೆ ರೋಗಗಳು ಯಾವುದರ ಹಾವಳಿಯಿಂದ ಉಂಟಾಗುತ್ತಿದೆ ? | |
| | ***ಉತ್ತರ :*** ಬೆಳೆಗೆ ರೋಗಗಳು ಕ್ರಿಮಿಕೀಟಗಳ ಹಾವಳಿಯಿಂದ ಉಂಟಾಗುತ್ತಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡ) 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು' ಎಂದು ಹೇಳಿದವರು ಯಾರು ? | |
| | **ಉತ್ತರ :** 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು' ಎಂದು ಸರ್ವಜ್ಞ ಹೇಳಿದ್ದಾರೆ. | |
| **XII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ರಾಷ್ಟ್ರೀಯ ಭಾವೈಕ್ಯತೆ. | |
| | **ಅಥವಾ** | |
| | ಯೋಗ ಶಿಕ್ಷಣದ ಮಹತ್ವ. | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| **XIII.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಂಜಯ್' ಎಂದು ಭಾವಿಸಿಕೊಂಡು, ಮುಂದಿನ ವ್ಯಾಸಂಗಕ್ಕಾಗಿ ನಿಮ್ಮ ವರ್ಗಾವಣೆ ಪ್ರಮಾಣಪತ್ರವನ್ನು ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಚಿಕ್ಕಬಳ್ಳಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಾಹಿತ್ಯ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಬೆಂಗಳೂರಿನಲ್ಲಿರುವ 'ಸುಮಿತ್ರ' ಎಂಬ ಹೆಸರಿನ ನಿಮ್ಮ ತಾಯಿಗೆ ಒಂದು ಪತ್ರವನ್ನು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |